### ಅಪೂರ್ವ ಲಕ್ಷ್ಮಣರೇಖೆಗಳು

‘ಅಪೂರ್ವ ಲಕ್ಷ್ಮಣರೇಖೆಗಳು’ (ಎನ್. ಜಗನ್ನಾಥ ಪ್ರಕಾಶ್, ನ. 25) ಲೇಖನವು, ಆರ್.ಕೆ. ಲಕ್ಷ್ಮಣ್ ಅವರ ಅಭೂತಪೂರ್ವ ಕಲೆಯನ್ನು ಬಿಂಬಿಸುವಲ್ಲಿ ಸಫಲವಾಗಿದೆ. ಸರ್ಕಾರವು ಇಂತಹ ಮಹನೀಯರನ್ನೂ ಉನ್ನತವಾಗಿ ಗೌರವಿಸುವಲ್ಲಿ ವಿಫಲವಾಗಿರುವುದು ವಿಪರ್ಯಾಸ.

—ಗುರುರಾಜ ಜೋಶಿ, ಬೆಂಗಳೂರು

### ಹಾಂಗ್ ಸನ್ ಡೂಂಗ್

‘ಹಾಂಗ್ ಸನ್ ಡೂಂಗ್’ (ಚೈತ್ರಿಕಾ ನಾಯ್ಕ ಹರ್ಗಿ, ನ.25) ಕುರಿತ ಲೇಖನ ವಿಸ್ಮಯಕಾರಿಯಾಗಿತ್ತು. ಲಾವೋಸ್ ವಿಯೆಟ್ನಾಮ್ ಗಡಿಯ ಬಳಿಯಿರುವ ಜಗತ್ತಿನ ಅತಿದೊಡ್ಡ ನಿಗೂಢ ಗುಹೆಯ ಐತಿಹ್ಯ ಬೆಚ್ಚಿಬೀಳಿಸುವಂತಿತ್ತು.

—ಪಿ.ಜಯವಂತ ಪೈ, ಕುಂದಾಪುರ

ಲೇಖನ ಅದ್ಭುತವಾಗಿದೆ. ಹೀಗೂ ಇರಬಹುದೇ? ಎಂದೆನಿಸುತ್ತದೆ. ಗುಹೆಯ ಒಳಗೆ ನದಿ, ಕಾಡು ಇರುವುದು, 5 ಕಿ.ಮೀ. ಉದ್ದವಿರುವುದು, ಅದರೊಳಗೆ ಜನರ ಪ್ರವೇಶ ಎಲ್ಲಾ ನಮ್ಮನ್ನು ವಿಸ್ಮಯಗೊಳಿಸುತ್ತದೆ.

—ಗಣೇಶ ರಾಜ್ ಕೆ.

### ‘ನರೇಗಾ’ ಅಂತರ್ಜಲ

‘‘ಗ್ರಾಮೀಣ ಆರ್ಥಿಕತೆಗೆ ‘ನರೇಗಾ’ ಅಂತರ್ಜಲ’’ (ಎನ್. ಉದಯಕುಮಾರ್, ನ.25) ‘ನಿಮ್ಮೊಡನೆ’ಯಲ್ಲಿ ಲೇಖನ ಚೆನ್ನಾಗಿತ್ತು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಭಾಗದಲ್ಲಿ ಸರಿಯಾಗಿ ಕಾರ್ಯಗತಗೊಂಡಿಲ್ಲದಿರುವುದು ವಾಸ್ತವ. ಇನ್ನಾದರೂ ಸರಕಾರ ಎಚ್ಚೆತ್ತುಕೊಳ್ಳಬೇಕು.


### ಉತ್ತಮ ಕಥೆ

‘ಭ್ರಮರ v/s ಬೀನಾರಾಣಿ’ (ಕನಕಮಾಲಿನಿ ಎಂ.ಎ. ನ.25) ಕಥೆ, ಪ್ರತಿಯೊಂದು ಕಾಲೇಜಿನಲ್ಲಿ ನಡೆಯುವ ಕಥೆಯೇ ಆಗಿದೆ. ತನ್ನ ತಂಟೆಗೆ ಬರದೇ ಇದ್ದರೂ ಪ್ರೊಫೆಸರ್ ಭ್ರಮರ, ಬೀನಾರಾಣಿ ಬಗ್ಗೆ ಹೊಟ್ಟೆಕಿಚ್ಚುಪಟ್ಟುಕೊಂಡು ಸಮಯ ಸಿಕ್ಕಾಗಲೆಲ್ಲ ಕೊಂಕು ಮಾತನಾಡುತ್ತ ಕೊನೆಗೆ ಸ್ವಂತ ಹಣ ನೀಡಿ ವರ್ಗಾವಣೆ ಮಾಡಿಸಿದರೂ ತನಗೆ ನೆಮ್ಮದಿ ಸಿಗದೇ ಚಡಪಡಿಸುತ್ತಾಳೆ. ಮುಖವಾಡದ ಬದುಕಿಗೆ ಸುಖವಿಲ್ಲವೆಂಬುದನ್ನು ಕಥೆ ಸ್ಪಷ್ಟಪಡಿಸುತ್ತದೆ.

—ಟಿ. ಎಸ್. ಕುಪ್ಪಣ್ಣ, ರಾಯಚೂರು

ಸಾಮಾನ್ಯವಾಗಿ ಎಲ್ಲಾ ವೃತ್ತಿಯಲ್ಲೂ ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ದುಡಿಯುವವರಿಗೆ ಕಾಟ ಕೊಡುವ ಭ್ರಮರಳಂಥವರು ಇದ್ದೇ ಇರುತ್ತಾರೆ. ಆದರೆ ಬೀನಾರಾಣಿಯ ಮಂದಹಾಸ ಮತ್ತು ಕರ್ತವ್ಯ ನಿಷ್ಠೆಯನ್ನು ಮುಟ್ಟಲಾಗದೆ ತಾನೇ ಮನಸ್ಸಿನ ತಳಮಳಕ್ಕೆ ಒಳಗಾಗಿದ್ದು ಕಥೆಯ ವಿಶೇಷ.

—ವಿಜಯಾ ಪ್ರಸಾದ್, ಬೆಂಗಳೂರು



ಕಥೆ ಅರ್ಥಪೂರ್ಣ ಮತ್ತು ವಾಸ್ತವಕ್ಕೆ ಹತ್ತಿರವಾಗಿದೆ. ‘ಕರ್ತವ್ಯವೇ ಮುಖ್ಯ’ ಎನ್ನುವ ಬೀನಾರಾಣಿ ಹಲವರಿಗೆ ಪ್ರೇರಣೆಯಾಗಬಲ್ಲ ಪಾತ್ರ. ಭ್ರಮರದಂಥ ಪಾತ್ರಗಳೂ ನಮ್ಮ ಸುತ್ತ ಇರುತ್ತವೆ. ಹಾಗಾಗಿ ನಾವು ಬೀನಾರಾಣಿಯ ಹಾಗೆ ಕಾರ್ಯನಿರ್ವಹಿಸಬೇಕು.

—ಬರಗೂರು ಸುಪ್ರಜ್
ಬೆಂಗಳೂರು

## ಮಾಹಿತಿಭರಿತ ಮತ್ತು ಸಂಶೋಧನಾತ್ಮಕ!


‘ಕ್ಷುದ್ರಗ್ರಹ ಅಪಾಯ ತರಬಲ್ಲ ಕುತೂಹಲಕಾರಿ ಆಕಾಶಕಾಯ’ (ಡಾ. ಬಿ.ಆರ್. ಗುರುಪ್ರಸಾದ್, ನ. 25) ವೈಜ್ಞಾನಿಕ ಸಚಿತ್ರ ಮುಖಪುಟ ಲೇಖನ, ಕೂಲಂಕಶವಾಗಿ ನಿಗೂಢ ಅಂತರಿಕ್ಷಕಾಯಗಳ ಬಗ್ಗೆ ಸರಳ ಭಾಷೆಯಲ್ಲಿ ಮಾಹಿತಿಭರಿತವಾಗಿ ಮೂಡಿಬಂದಿದೆ. ಹಲವು ದಶಕಗಳ ಕಾಲ ವಿಜ್ಞಾನಿಗಳಿಗೆ ಕುತೂಹಲ ಹಾಗೂ ಆತಂಕ ತಂದಿದ್ದ ಈ ವಿನಾಶಕಾರಿ ಗಗನಕಾಯಗಳ ಬಗ್ಗೆ ಇತ್ತೀಚಿನ ನಾಸಾ ಉಪಗ್ರಹಗಳ ಯಶಸ್ವಿ ಉಡಾವಣೆ, ತಲುಪುವಿಕೆ ಮುಂತಾದ ಬೆಳವಣಿಗೆಗಳ ವಿಸ್ತೃತ ಮಾಹಿತಿ ನಮಗೆ ದೊರಕಿಸಿದ್ದಕ್ಕೆ ಧನ್ಯವಾದಗಳು. ಹಾಗೆಯೇ, ವಿನಾಶಕಾರಿ ರಹಸ್ಯಮಯ ದೈತ್ಯಗ್ರಹವೆನಿಸಿದ ‘ನಿಬಿರು’ ಭೂಮಿಗೆ ಅಪ್ಪಳಿಸುವ ಬಗ್ಗೆ ವೈಜ್ಞಾನಿಕ ಲೋಕದಲ್ಲಿ ಹಲವು ಭಿನ್ನ ಚರ್ಚೆಗಳಿವೆ. ಅವು ಕಾಲ್ಪನಿಕವೋ, ಇನ್ನೂ ಕಂಡುಹಿಡಿಯದ ಸತ್ಯವೋ ಎಂಬುದರ ಬಗ್ಗೆ ಈ ಲೇಖನ ಸ್ವಲ್ಪ ಬೆಳಕು ಚೆಲ್ಲಿದ್ದರೆ ಚೆನ್ನಿತ್ತು ಎನಿಸಿತು.

—ನಾಗೇಶ್ ಕುಮಾರ್ ಸಿ.ಎಸ್., ಬೆಂಗಳೂರು

ಇಷ್ಟು ಆಳವಾದ ವಿಷಯವನ್ನು ಇಷ್ಟು ಸಮಗ್ರವಾಗಿ ಮತ್ತು ಸುಲಲಿತವಾಗಿ ಕನ್ನಡದಲ್ಲಿ ಬೋಧಿಸಿರುವ ಡಾ. ಬಿ.ಆರ್. ಗುರುಪ್ರಸಾದ್ ಅವರಿಗೆ ನಮನಗಳು.

—ಎ. ಜಾನಕಿರಾಮ್, ಬೆಂಗಳೂರು

ಕ್ಷುದ್ರಗ್ರಹಗಳ ಬಗ್ಗೆ ಲೇಖನ ಒಳಗೊಂಡಿರುವ ಮಾಹಿತಿ ನಿಜಕ್ಕೂ ಉತ್ಕೃಷ್ಟವಾಗಿದೆ. ನಮ್ಮ ಕನ್ನಡದಲ್ಲಿಯೇ ಇಷ್ಟೆಲ್ಲ ಮಾಹಿತಿ ದೊರಕಿರುವುದು ಅಂತರಿಕ್ಷದ ಕುರಿತು ಕನ್ನಡಿಗರ ಜ್ಞಾನವನ್ನು ಹೆಚ್ಚಿಸುವ ಹಾಗಿದೆ. ಇಂಥ ವೈಜ್ಞಾನಿಕ ಲೇಖನಗಳನ್ನು ಮಕ್ಕಳು ಕನ್ನಡದಲ್ಲಿಯೇ ಓದುವುದರಿಂದ ಅವರ ಜ್ಞಾನವನ್ನು ಹೆಚ್ಚಿಸುತ್ತದೆ.



—ಭೋಜರಾಜ ಜೆ.
ಸಂತೆಬೆನ್ನೂರು

‘ನವರ: ಇಂಡಿಯನ್ ವಯಾಗ್ರ’ (ಮಲ್ಲಿಕಾರ್ಜುನ ಹೊಸಪಾಳ್ಯ, ನ. 25) ಲೇಖನವೂ ಚೆನ್ನಾಗಿತ್ತು. ನವರ ಭತ್ತ ನರ ದೌರ್ಬಲ್ಯ, ಬೆನ್ನು ನೋವು, ಮಧುಮೇಹದಂಥ ರೋಗಗಳ ನಿಯಂತ್ರಣಕ್ಕೆ ಒಳ್ಳೆಯದು.

—ಬಸಪ್ಪ ಸೊ. ಮುಳ್ಳೂರ, ರಾಮದುರ್ಗ

ಮಲೆನಾಡಿನಲ್ಲಿ ಹಿಂದೆ ಕೊಯಿಮತ್ತೂರು, ರತ್ನಸೂಡಿ, ಜೋಳಗ, ಕಾಮದಾರಿ, ಅಸೂಡಿ ಮುಂತಾದ ಸ್ಥಳೀಯ ಭತ್ತದ ತಳಿಗಳನ್ನು ರಾಸಾಯನಿಕ ಗೊಬ್ಬರ ಉಪಯೋಗಿಸದೇ ಬೆಳೆಯುತ್ತಿದ್ದರು. ಇವು ಸ್ವಲ್ಪ ದಪ್ಪ, ಕೆಂಪು ಭತ್ತದ ತಳಿಗಳಾಗಿದ್ದು ಆರೋಗ್ಯದ ದೃಷ್ಟಿಯಿಂದ ಉತ್ತಮ ತಳಿಗಳಾಗಿದ್ದವು.

ಆದರೆ ಈಗ ಆಧುನಿಕತೆಯ ಸೋಂಕಿಗೆ ಒಳಗಾದ ರೈತ ಬಿಳಿಬಣ್ಣದ ಅಕ್ಕಿಯನ್ನೇ ಊಟ ಮಾಡಬೇಕೆಂಬ ಹಂಬಲದಿಂದ ಹಾಗೂ ಹೆಚ್ಚಿಗೆ ಇಳುವರಿ ತೆಗೆಯಬೇಕೆಂಬ ದುರಾಸೆಯಿಂದ ಹೆಚ್ಚು ರಾಸಾಯನಿಕ ಗೊಬ್ಬರ ಉಪಯೋಗಿಸಿ ಐ.ಇ.ಟಿ.ಯಂಥ ಆಧುನಿಕ ತಳಿಗಳನ್ನು ಬೆಳೆಯಲು ಶುರುಮಾಡಿದ. ಹಿಂದಿನ ತಳಿಗಳು ಊಟ ಮಾಡಲು ತುಂಬಾ ರುಚಿಕಟ್ಟಾಗಿದ್ದು, ಆಧುನಿಕ ತಳಿಗಳು ತುಂಬಾ ಸಪ್ಪೆ ಎನಿಸುತ್ತವೆ. ‘ನವರ’ದಂಥ ಔಷಧೀಯ ತಳಿಗಳನ್ನು ಹೆಚ್ಚು ಹೆಚ್ಚು ಉಪಯೋಗಿಸುವುದರ ಮೂಲಕ ದೃಢಕಾಯರಾಗಿ ಬೆಳೆದು ನಮ್ಮ ಜೀವನವನ್ನು ಪಾವನ ಮಾಡಿಕೊಳ್ಳಬೇಕಾಗಿದೆ!

—ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು
ಪ್ರವೀಣ್ ಕುಮಾರ್, ಶಿವಮೊಗ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in